ಕ್ರ.ಸಂ 11(A)

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕಟ್ಟಡ ಮತ್ತು ಇತರೆ ನಿರ್ಮಾಣ ಕೆಲಸಗಾರರ ಕಲ್ಯಾಣ ಸುಂಕ ಕಾಯ್ದೆ 1996 ರಡಿ ಕಟ್ಟಡ ನಿರ್ಮಾಣಗಾರರು / ನಿಯೋಜಕರು ಇವರಿಂದ ನಿರ್ಮಾಣ ವೆಚ್ಚದ 1 % ಸುಂಕವನ್ನು ವಸೂಲಿ ಮಾಡುವ ಬಗ್ಗೆ.

ಓದಲಾಗಿದೆ: 1. ಕೇಂದ್ರಸರ್ಕಾರದ ದಿನಾಂಕ: 26-9-1996 ರ ಅಧಿಸೂಚನೆ.

2. ಸರ್ಕಾರದ ಅಧಿಸೂಚನೆ ಸಂ: ಕಾಇ 168 ಎಲ್ಇಟಿ 2004, ದಿನಾಂಕ: 1-11-2006.

---

## ಪ್ರಸ್ತಾವನೆ:

ಕಟ್ಟಡ ಮತ್ತು ಇತರೆ ನಿರ್ಮಾಣ ಕೆಲಸಗಾರರ (ಉದ್ಯೋಗ ವಿನಿಯಮ ಮತ್ತು ಸೇವಾ ಷರತ್ತುಗಳು) ಕಾಯ್ದೆ 1996 ನ್ನು (ಇನ್ನು ಮುಂದಕ್ಕೆ ಮುಖ್ಯ ಕಾಯ್ದೆ ಎಂದು ಉಲ್ಲೇಖಿಸಲಾಗುವುದು) ಜಾರಿಗೆ ತರಲು ಉದ್ದೇಶಿಸಿ ರಾಜ್ಯ ಸರ್ಕಾರವು ಕಟ್ಟಡ ಮತ್ತು ಇತರೆ ನಿರ್ಮಾಣ ಕೆಲಸಗಾರರ (ಉದ್ಯೋಗ ವಿನಿಯಮ ಮತ್ತು ಸೇವಾ ಷರತ್ತುಗಳು) ನಿಯಮಾವಳಿ 2006 ನ್ನು ಉಲ್ಲೇಖ-2 ರಲ್ಲಿನ ಅಧಿಸೂಚನೆಯ ಮೂಲಕ ರಚಿಸಿರುತ್ತದೆ.

ಮುಖ್ಯ ಕಾಯ್ದೆಯ ಅಡಿಯಲ್ಲಿ ರಚಿಸಲಾಗಿರುವ ಕಟ್ಟಡ ಮತ್ತು ಇತರೆ ನಿರ್ಮಾಣ ಕೆಲಸಗಾರರ ಕಲ್ಯಾಣ ಮಂಡಳಿಗೆ ಸಂಪನ್ಮೂಲವನ್ನು ಕ್ರೋಢೀಕರಿಸುವ ಸಲುವಾಗಿ ಕಟ್ಟಡ ನಿರ್ಮಾಣಗಾರರು ಹಾಗೂ ನಿಯೋಜಕರಿಂದ ನಿರ್ಮಾಣ ವೆಚ್ಚದ ಮೇಲೆ ಸುಂಕ ವಸೂಲು ಮಾಡಲು ಕೇಂದ್ರ ಸರ್ಕಾರವು ಕಟ್ಟಡ ಮತ್ತು ಇತರೆ ನಿರ್ಮಾಣ ಕೆಲಸಗಾರರ ಕಲ್ಯಾಣ ಸುಂಕ ಕಾಯ್ದೆ 1996 ನ್ನು ಜಾರಿಗೆ ತಂದಿದ್ದು, ಅದರಡಿಯಲ್ಲಿ ನಿಯಮಗಳನ್ನು ರಚಿಸಿದೆ. ಭೂಮಿಯ ಬೆಲೆ ಹಾಗೂ ಕಾರ್ಮಿಕ ನಷ್ಟ ಪರಿಹಾರ ಕಾಯ್ದೆ 1923 ರ ಅಡಿ ನೌಕರನಿಗೆ ಅಥವಾ ಆತನ ಬಂಧು ವರ್ಗಕ್ಕೆ ನೀಡಲಾಗುವ ಪರಿಹಾರವನ್ನು ಹೊರತುಪಡಿಸಿ, ಕಟ್ಟಡದ ನಿರ್ಮಾಣಕ್ಕೆ ತಗಲುವ ವೆಚ್ಚದ 1% ದರದಲ್ಲಿ ಸುಂಕವನ್ನು ಕೇಂದ್ರ ಸರ್ಕಾರವು ಅಧಿಸೂಚನೆಯಲ್ಲಿ ನಿಗದಿಪಡಿಸಿರುತ್ತದೆ. ಮುಖ್ಯ ಕಾಯ್ದೆಯ ಕಲಂ 2(ಡಿ) ಯಲ್ಲಿ ವ್ಯಾಖ್ಯಾನಿಸಲಾದ ಕಟ್ಟಡ ಮತ್ತು ಇತರೆ ನಿರ್ಮಾಣ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಸುಂಕ ನಿಗದಿ ಹಾಗೂ ಸಂಗ್ರಹವನ್ನು ಮಾಡಲಾಗುತ್ತದೆ.

ಮುಖ್ಯ ಕಾಯ್ದೆಯ ಪ್ರಾವಧಾನಗಳು ಯಾವ ನಿಯೋಜಕನಿಗೆ ಅನ್ವಯವಾಗುತ್ತದೋ ಅಂತಹವರಿಗೆ ಸುಂಕ ಹಾಗೂ ವಸೂಲಾತಿಯು ಅಜ್ಞಾಪಕವಾಗಿರುತ್ತದೆ ಮತ್ತು ಅಂತಹ ನಿಯೋಜಕನು ಮುಖ್ಯ ಕಾಯ್ದೆಯ ಅಡಿಯಲ್ಲಿ ರಚಿಸಲ್ಪಡುವ ಮಂಡಳಿಗೆ ಸುಂಕವನ್ನು ಪಾವತಿಸಲು ಬದ್ಧನಾಗಿರುತ್ತಾನೆ. ಸುಂಕ ಕಾಯ್ದೆ

1996 ರ ಕಲಂ 3(2) ಸುಂಕ ವಸೂಲಾತಿಗೆ ಅವಕಾಶವನ್ನು ಕಲ್ಪಿಸಿರುತ್ತದೆ. ಕಲಂ 3(2) ಈ ಕೆಳಗಿನಂತಿದೆ:

> " The cess levied under sub-section (1) shall be collected from every employer in such manner and at such time, including deduction at source in relation to a building or other construction work of a Government or of a public sector undertaking or advance collection through a local authority where an approval of such building or other construction work by such local authority is required, as may be prescribed."

ಹಾಗೆಯೇ ಮುಖ್ಯ ಕಾಯ್ದೆಯ ಕಲಂ 2(ಡಿ) ಯಲ್ಲಿನ ವ್ಯಾಖ್ಯೆ, ಈ ಕೆಳಗಿನಂತಿದೆ:

> " Building or other construction work " means the construction alteration, repairs, maintenance, demolition of or, in relation to buildings, streets, roads, railways, tramways, airfields, irrigation, drainage, embankment and navigation works, flood control workes (including storm water drain works) generation, transmission and distribution power, water works (including channels, distribution of water) oil and gas installation electric lines, wireless, radio, television, telephone, telegraph and overseas, communications, canals, reservoirs, water courses, tunnels, bridge viaducts, aquaducts, pipelines, towers, cooling towers, transmission towers and such other work may be specified in this behalf by the appropriate Government, by notification but does not include any building or other construction work to which the provisions of the Factories Act, 1948 (63 of 1948) of the Mines Act, 1952 (35 of 1952) apply;

ಯಾವುದೇ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಯಗಳಲ್ಲಿ ಹಿಂದಿನ 12 ತಿಂಗಳ ಯಾವುದೇ ದಿನದಲ್ಲಿ 10 ಅಥವಾ ಅದಕ್ಕಿಂತ ಹೆಚ್ಚಿನ ಸಂಖ್ಯೆಯ

ಕೆಲಸಗಾರರನ್ನು ಕೆಲಸಕ್ಕೆ ನಿಯೋಜಿಸಿಕೊಂಡಿರುವ ಎಲ್ಲಾ ಸಂಸ್ಥೆಗಳಿಗೆ ಮುಖ್ಯ ಕಾಯ್ದೆಯು ಅನ್ವಯಿಸುತ್ತದೆ. ಈ ರೀತಿ ಈ ಕಾಯ್ದೆಯು ಯಾವ ಸಂಸ್ಥೆಗೆ ಅನ್ವಯವಾಗುತ್ತದೋ ಅಂತಹ ಸಂಸ್ಥೆಗಳಿಗೆ ಸಂಬಂಧಪಟ್ಟ ಸರ್ಕಾರವು ಕೇಂದ್ರ ಸರ್ಕಾರವಾಗಿರಲಿ ಅಥವಾ ರಾಜ್ಯ ಸರ್ಕಾರವಾಗಿರಲಿ ಅಂತಹ ಸಂಸ್ಥೆಗಳ ಯಜಮಾನನು ಸುಂಕವನ್ನು ಸಂಗ್ರಹಿಸಿ ಕಟ್ಟಡ ಮತ್ತು ಇತರೆ ನಿರ್ಮಾಣ ಕೆಲಸಗಾರರ ಕಲ್ಯಾಣ ಸುಂಕ ಕಾಯ್ದೆ 1996 ರಡಿಯಲ್ಲಿ ನಿಗದಿಪಡಿಸಿರುವ ವಿಧಾನದಲ್ಲಿ ಅದನ್ನು ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕೆಲಸಗಾರರ ಕಲ್ಯಾಣ ಮಂಡಳಿಗೆ ಪಾವತಿಸಬೇಕಾಗುತ್ತದೆ.

ಸುಂಕ ಕಾಯ್ದೆ 1996ರ ಪ್ರಾವಧಾನಗಳಂತೆ ಈ ಕೆಳಗಿನ ವ್ಯಕ್ತಿಗಳು ಸುಂಕ ನೀಡಲು ಬದ್ಧರಾಗಿರುತ್ತಾರೆ:-

(i) ಸರ್ಕಾರಿ ಇಲಾಖೆಗಳು, ಸಾರ್ವಜನಿಕ ವಲಯ ಉದ್ದಿಮೆಗಳು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಕೆಪಿಟಿಸಿಎಲ್. ಕರ್ನಾಟಕ ವಿದ್ಯುತ್ ಮಂಡಳಿ, ರೈಲ್ವೆ ಪ್ರಾಧಿಕಾರ, ವಿಮಾನ ನಿಲ್ದಾಣ ಪ್ರಾಧಿಕಾರ, ಭೂ ಸೇನಾ ನಿರ್ಮಾಣ ನಿಗಮ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಗುತ್ತಿಗೆದಾರನಿಲ್ಲದೆ ಕಾರ್ಯ ನಿರ್ವಹಿಸಿದಲ್ಲಿ ಇಲಾಖಾ ಮುಖ್ಯಸ್ಥರು, ಗುತ್ತಿಗೆದಾರನ ಮೂಲಕ ಕಾರ್ಯ ನಿರ್ವಹಿಸಿದಲ್ಲಿ ಇದಕ್ಕೆ ಸಂಬಂಧಿಸಿದಂತೆ ನಿಗದಿಪಡಿಸಿರುವ ಪ್ರಾಧಿಕಾರಿ, ಪ್ರಾಧಿಕಾರಿಯನ್ನು ನಿಗದಿಪಡಿಸಿರದಿದ್ದಲ್ಲಿ ಇಲಾಖಾ ಮುಖ್ಯಾಧಿಕಾರಿ.

(ii) ಸ್ಥಳೀಯ ಪ್ರಾಧಿಕಾರಗಳಿಗೆ ಸಂಬಂಧಿಸಿದಂತೆ ಕಾರ್ಯವನ್ನು ನೇರವಾಗಿ ಅಥವಾ ಗುತ್ತಿಗೆದಾರರ ಮೂಲಕ ನಿರ್ವಹಿಸಿದರೂ ಸಹ ಆ ಸಂಸ್ಥೆಯ ಮುಖ್ಯ ಕಾರ್ಯ ನಿರ್ವಹಣಾ ಅಧಿಕಾರಿ

(iii) ವೈಯಕ್ತಿಕ ವಾಸ ಗೃಹಕ್ಕೆ ಸಂಬಂಧಿಸಿದಂತೆ ಅದರ ಮಾಲೀಕ.

(iv) ವಸತಿ ಸಮುಚ್ಚಯ, ದೊಡ್ಡ ಮಾಲ್‌ಗಳು, ಆಸ್ಪತ್ರೆಗಳು ವಸತಿ ಘಟಕಗಳಿಗೆ ಸಂಬಂಧಿಸಿದಂತೆ ಕಟ್ಟಡ ನಿರ್ಮಾಣಗಾರರು ಅಥವಾ ಗುತ್ತಿಗೆದಾರರು.

ಕಟ್ಟಡ ಮತ್ತು ಇತರೆ ನಿರ್ಮಾಣ ಕೆಲಸಗಾರರ ಕಲ್ಯಾಣ ಸುಂಕ ಕಾಯ್ದೆ 1996, 3 ನೇ ನವೆಂಬರ್ 1995 ರಿಂದ ಜಾರಿಗೆ ಬಂದಿದ್ದರೂ ಸಹ ಸುಂಕದ ಸಂಗ್ರಹಣೆಯನ್ನು ಇದೀಗ ತಕ್ಷಣದಿಂದ ಜಾರಿಗೆ ಬರುವಂತೆ ಸಂಗ್ರಹಿಸಲು ಸರ್ಕಾರವು ನಿರ್ಧರಿಸಿದೆ. ಈ ಹಿನ್ನೆಲೆಯಲ್ಲಿ ಈ ಆದೇಶವನ್ನು ಹೊರಡಿಸಲಾಗಿದೆ.

<u>ಸರ್ಕಾರಿ ಆದೇಶ ಸಂ: ಕಾಇ 300 ಎಲ್‌ಇಟಿ 2006</u>

<u>ಬೆಂಗಳೂರು, ದಿನಾಂಕ: 18-1-2007</u>

[illegible] ಪ್ರಾವಧಾನಗಳನ್ನು ಜಾರಿಗೆ ತರಲು ಸರ್ಕಾರವು ನಿರ್ಧರಿಸಿರುವ ಹಿನ್ನೆಲೆಯಲ್ಲಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

77(1)

ಅ. ಮುಖ್ಯ ಕಾಯ್ದೆಯ ಕಲಂ 2 (ಡಿ) ಯ ಅಡಿಯಲ್ಲಿ ಹೇಳಲಾದ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಯವನ್ನು ನಿರ್ವಹಿಸುವ ಎಲ್ಲಾ ಸರ್ಕಾರಿ ಇಲಾಖೆಗಳು, ಸಾರ್ವಜನಿಕ ವಲಯ ಉದ್ದಿಮೆಗಳು ಮತ್ತು ಇತರ ಸರ್ಕಾರಿ ಏಜೆನ್ಸಿಗಳು / ನಿಕಾಯಗಳು ಕಾರ್ಯವನ್ನು ಗುತ್ತಿಗೆದಾರರ ಮೂಲಕ ನಿರ್ವಹಿಸಿದರೆ ಟೆಂಡರ್ ಅಧಿಸೂಚನೆಯ ಪ್ರಕಾರ ಅನುಮೋದಿತವಾದ ನಿರ್ಮಾಣ ವೆಚ್ಚದ 1 % ಮೊತ್ತವನ್ನು ಗುತ್ತಿಗೆದಾರನಿಗೆ ಬಿಲ್ ಪಾವತಿಸುವಾಗ ಅದರಿಂದ ಕಳೆದು, ಈ ರೀತಿ ಕಳೆಯಲಾದ ಮೊತ್ತವನ್ನು ಬಿಲ್ ಪಾವತಿಸಿದ 30 ದಿನಗಳ ಒಳಗಾಗಿ ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕೆಲಸಗಾರರ ಕಲ್ಯಾಣ ಮಂಡಳಿಯ ಹೆಸರಿಗೆ ಬರೆಯಲಾದ ಅಕೌಂಟ್ ಪೇಯೀ ಚೆಕ್ ಮೂಲಕ ಕಾರ್ಯದರ್ಶಿ ಕಂ ಮುಖ್ಯ ಕಾರ್ಯ ನಿರ್ವಹಣಾ ಅಧಿಕಾರಿ, ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕೆಲಸಗಾರರ ಕಲ್ಯಾಣ ಮಂಡಳಿ, 3 ನೇ ಹಂತ ಕಾರ್ಮಿಕ ಭವನ, ಬನ್ನೇರುಘಟ್ಟ ರಸ್ತೆ, ಬೆಂಗಳೂರು, ಇವರಿಗೆ ರವಾನಿಸಲಾದ ಪತ್ರದೊಂದಿಗೆ ಕಳುಹಿಸತಕ್ಕದ್ದು.

ದಿನಾಂಕ: 1-11-2006 ಕ್ಕೂ ಮುಂಚಿತವಾಗಿ ಟೆಂಡರನ್ನು ಒಪ್ಪಿಸಲಾಗಿದ್ದು ಹಾಗೂ ಅಂತಿಮಗೊಳಿಸಿದ್ದು, ಕಾರ್ಯವನು ಗುತ್ತಿಗೆದಾರನಿಗೆ ವಹಿಸಿದ್ದಲ್ಲಿ ಅಂತಹ ಪ್ರಕರಣಗಳಲ್ಲಿ ಸಹ 1 % ಸುಂಕವನ್ನು ಈ ಮೇಲೆ ಹೇಳಿದ ರೀತಿಯಲ್ಲಿ ಸಂಬಂಧಿತ ಇಲಾಖೆಗಳು ಮಂಡಳಿಗೆ ಪಾವತಿಸತಕ್ಕದ್ದು.

ಆ. ಈ ಮೇಲೆ ಹೇಳಿರುವ ಕಾರ್ಯಗಳನ್ನು ಸರ್ಕಾರಿ ಇಲಾಖೆಗಳು, ಸಾರ್ವಜನಿಕ ವಲಯ ಉದ್ದಿಮೆಗಳು ಮತ್ತು ಇತರೆ ಸರ್ಕಾರಿ ನಿಕಾಯಗಳು ಆಂತರಿಕವಾಗಿ ಕೈಗೊಂಡಲ್ಲಿ ಇಲಾಖೆಯ / ಸಂಸ್ಥೆಯ ಮುಖ್ಯ ಕಾರ್ಯ ನಿರ್ವಾಹಕರು ಒಟ್ಟು ವೆಚ್ಚದ 1 % ಸುಂಕವನ್ನು ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕೆಲಸಗಾರರ ಕಲ್ಯಾಣ ಮಂಡಳಿಯ ಹೆಸರಿಗೆ ಅಕೌಂಟ್ ಪೇಯೀ ಚೆಕ್ ಮೂಲಕ ನೀಡತಕ್ಕದ್ದು.

ಇ. ನಿರ್ಮಾಣ ಕಾಮಗಾರಿಗೆ ಸ್ಥಳೀಯ ಪ್ರಾಧಿಕಾರದ ಅನುಮೋದನೆಯ ಅವಶ್ಯಕತೆ ಇರುವ ಪ್ರಕರಣಗಳಲ್ಲಿ ಎಲ್ಲಾ ಸ್ಥಳೀಯ ಪ್ರಾಧಿಕಾರಿಗಳು ಮುಖ್ಯವಾಗಿ ಬೆಂಗಳೂರು ಮಹಾನಗರ ಪಾಲಿಕೆ, ಎಲ್ಲಾ ಮಹಾನಗರ ಸಭೆಗಳು, ನಗರಸಭೆಗಳು, ಪುರಸಭೆಗಳು, ಪಂಚಾಯಿತಿಗಳು ಇತ್ಯಾದಿ ಸಂಬಂಧಿಸಿದ ಕಟ್ಟಡಗಳ ಮಾಲೀಕರು/ ಗುತ್ತಿಗೆದಾರರು/ ನಿರ್ಮಾಣಗಾರರು ಅನುಮೋದನೆಗಾಗಿ ಸಲ್ಲಿಸುವ ಕಟ್ಟಡದ ನಕ್ಷೆಯೊಂದಿಗೆ ನಿರ್ಮಾಣದ ಅಂದಾಜು ವೆಚ್ಚವನ್ನು ಸಹ ಪಡೆಯತಕ್ಕದ್ದು ಮತ್ತು ಕಟ್ಟಡ ನಕ್ಷೆಯ ಜೊತೆ ನೀಡಿರುವ ಅಂದಾಜು ವೆಚ್ಚದ 1% ಸುಂಕವನ್ನು ಮೊದಲೇ ಸಂಗ್ರಹಿಸಿ, ಸುಂಕ ನಿಯಮಾವಳಿ 1998 ರ ನಿಯಮ 5(3) ರಲ್ಲಿ ನಿಗದಿಪಡಿಸಿದಂತೆ 30 ದಿನಗಳ ಒಳಗಾಗಿ ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕೆಲಸಗಾರರ ಕಲ್ಯಾಣ ಮಂಡಳಿ ಹೆಸರಿಗೆ ಕ್ರಾಸ್ ಮಾಡಿರುವ ಡಿಮ್ಯಾಂಡ್ ಡ್ರಾಫ್ಟ್ ಮೂಲಕ ರವಾನಿಸುವ ಪತ್ರದೊಂದಿಗೆ ಕಳುಹಿಸತಕ್ಕದ್ದು. ತಮ್ಮ ಆಡಳಿತಾತ್ಮಕ ವೆಚ್ಚವನ್ನು ಭರಿಸುವ ಸಲುವಾಗಿ ಸಂಗ್ರಹಿಸಲ್ಪಟ್ಟ ಸುಂಕದ 1% ನ್ನು ಸ್ಥಳೀಯ ಸಂಸ್ಥೆಗಳು ಕಳೆದು ಉಳಿದ ಮೊತ್ತವನ್ನು ಮಂಡಳಿಗೆ ಪಾವತಿಸತಕ್ಕದ್ದು.

77(D1

ಕರ್ನಾಟಕ ಸರ್ಕಾರ

ಸಂ: ಕಾಇ 300 ಎಲ್ಇಟಿ 2006

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ,
ಬೆಂಗಳೂರು, ದಿನಾಂಕ: 28-2-2007.

## ತಿದ್ದುಪಡಿ

ಸರ್ಕಾರಿ ಆದೇಶ ಸಂ: ಕಾಇ 300 ಎಲ್ಇಟಿ 2006, ದಿನಾಂಕ:18-1-2007ರ ಆದೇಶ ಭಾಗದ ಕಂಡಿಕೆ (ಇ) ಅನ್ನು ತೆಗೆದು ಹಾಕಲಾಗಿದೆ ಹಾಗೂ ಅದರ ಬದಲಿಗೆ ಈ ಕೆಳಗಿನ ಕಂಡಿಕೆಯನ್ನು ಸೇರಿಸಲಾಗಿದೆ.

*(ಇ) ನಿರ್ಮಾಣ ಕಾಮಗಾರಿಗೆ ಸ್ಥಳೀಯ ಪ್ರಾಧಿಕಾರದ ಅನುಮೋದನೆಯ ಅವಶ್ಯಕತೆ ಇರುವ ಪ್ರಕರಣಗಳಲ್ಲಿ ಎಲ್ಲಾ ಸ್ಥಳೀಯ ಪ್ರಾಧಿಕಾರಿಗಳು ಮುಖ್ಯವಾಗಿ ಬೆಂಗಳೂರು ಮಹಾನಗರ ಪಾಲಿಕೆ, ಎಲ್ಲಾ ಮಹಾನಗರ ಸಭೆಗಳು, ನಗರಸಭೆಗಳು, ಪುರಸಭೆಗಳು, ಪಂಚಾಯಿತಿಗಳು ಇತ್ಯಾದಿ; ಸಂಬಂಧಿಸಿದ ಕಟ್ಟಡಗಳ ಮಾಲೀಕರು/ ಗುತ್ತಿಗೆದಾರರು/ ನಿರ್ಮಾಣಗಾರರು ಅನುಮೋದನೆಗಾಗಿ ಸಲ್ಲಿಸುವ ಕಟ್ಟಡದ ನಕ್ಷೆಯೊಂದಿಗೆ ನಿರ್ಮಾಣದ ಅಂದಾಜು ವೆಚ್ಚವನ್ನು ಸಹ ಪಡೆಯತಕ್ಕದ್ದು ಹಾಗೂ ಇಂತಹ ಸಂಸ್ಥೆಗಳು ಅಂದಾಜು ವೆಚ್ಚದ 1 % ಸುಂಕವನ್ನು ಮೊದಲೇ ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕೆಲಸಗಾರರ ಕಲ್ಯಾಣ ಮಂಡಳಿಯ ಹೆಸರಿಗೆ ಡಿಮ್ಯಾಂಡ್ ಡ್ರಾಫ್ಟ್ ಮೂಲಕ ಪಡೆದು, ಸುಂಕ ನಿಯಮಾವಳಿ 1998 ರ ನಿಯಮ 5(3) ರಲ್ಲಿ ನಿಗದಿಪಡಿಸಿದಂತೆ 30 ದಿನಗಳ ಒಳಗಾಗಿ ರವಾನಿಸುವ ಪತ್ರದೊಂದಿಗೆ ಮಂಡಳಿಗೆ ಸಲ್ಲಿಸತಕ್ಕದ್ದು. (ಈ ರೀತಿ ಸಂಗ್ರಹಿಸಲ್ಪಟ್ಟ ಮೊತ್ತದ 1 % ವನ್ನು ಮಂಡಳಿಯು ಸ್ಥಳೀಯ ಸಂಸ್ಥೆಗಳಿಗೆ ಸೇವೆ ಸಲ್ಲಿಸಿದುದಕ್ಕಾಗಿ ಹಿಂದಿರುಗಿಸತಕ್ಕದ್ದು.)*

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ವಿಮಲಾ ಕುಮಾರಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕಾರ್ಮಿಕ ಇಲಾಖೆ.

ಇವರಿಗೆ:

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು, ಮುಂದಿನ ರಾಜ್ಯ ಪತ್ರದಲ್ಲಿ ಪ್ರಕಟಿಸಿ 200 ಪ್ರತಿಗಳನ್ನು ಸರ್ಕಾರಕ್ಕೆ ಕಳುಹಿಸುವಂತೆ ಹಾಗೂ 200 ಪ್ರತಿಗಳನ್ನು ಕಾರ್ಮಿಕ ಆಯುಕ್ತರಿಗೆ ಕಳುಹಿಸುವಂತೆ ಕೋರಿದೆ.